ಕಾಲದ ಪ್ರತಿ ಹೆಜ್ಜೆಯಲ್ಲೂ ಸೃಷ್ಟಿ–ಲಯಗಳ ಸಂಗಮವೇ ಇರುವುದರಿಂದ, ಕಾಲದ ಯಾವ ಕ್ಷಣವೂ ಕೂಡ ಆರಂಭವೂ ಆಗಬಲ್ಲದು; ಮಾತ್ರವಲ್ಲ, ಈ ಆರಂಭವೇ ಶಾಶ್ವತವೂ ಹೌದು. ಏಕೆಂದರೆ ಕಾಲಚಕ್ರದ ಸುತ್ತಾಟವಂತೂ ನಿರಂತರ ಪ್ರಕ್ರಿಯೆ ಹೌದಷ್ಟೆ! ಎಂದರೆ ನಮ್ಮ ನಿತ್ಯಜೀವನದ ಯಾವ ಕ್ಷಣವೂ ಕೂಡ 'ಯುಗದ ಆದಿ' ಆಗಬಹುದು. ಈ ಮಹಾತತ್ತ್ವವನ್ನು ಹಬ್ಬವಾಗಿ ಕಂಡು ನಲಿಯುವ ದಿನವೇ ಯುಗಾದಿ.

■ ಎಸ್. ಸೂರ್ಯಪ್ರಕಾಶ ಪಂಡಿತ್



# ಯುಗಾದಿ
## ಕಾಲಚಕ್ರದ ಋತುಗಾನ

ಕಾಲವನ್ನು ಗೆಲ್ಲಬೇಕು. ಇದೇ ಬುದ್ಧಿವಂತನಾದ ಮನುಷ್ಯನ ನಿರಂತರ ಪ್ರಯತ್ನ. ಅವನ ಎಲ್ಲ ಚಟುವಟಿಕೆಗಳ ಹಿನ್ನೆಲೆಯಲ್ಲೂ ಅವನ ಈ ಮಹದಾಸೆಯೇ ಕಾಣಿಸುತ್ತಿರುತ್ತದೆ. ಇಷ್ಟಕ್ಕೂ ಕಾಲವನ್ನು ಗೆಲ್ಲುವುದಕ್ಕೆ ಸಾಧ್ಯವೆ?

ಸಾಧ್ಯ ಎನ್ನುತ್ತದೆ ನಮ್ಮ ಸಂಸ್ಕೃತಿ. ಹೇಗೆ ಸಾಧ್ಯ? ನಾವು ಕಾಲದ ಜೊತೆಗೆ ಒಂದಾಗಬೇಕು, ಅದರೊಂದಿಗೆ ನಿರಂತರ ಪಯಣಿಸುತ್ತಲೇ ಇರಬೇಕು. ಇದೇ ಕಾಲವನ್ನು ಗೆಲ್ಲುವ ಪರಿ ಎಂಬ ರಹಸ್ಯವನ್ನು ದಕ್ಕಿಸಿಕೊಂಡ ಪರಂಪರೆ, ಈ ಸೂಕ್ಷ್ಮವನ್ನು ಹಲವು ವಿಧಿ–ವಿಧಾನಗಳು ಮೂಲಕ ಮುಂದಿನ ಪೀಳಿಗೆಗೆ ರವಾನಿಸುತ್ತಲೇ ಬಂದಿದೆ. ನಮ್ಮ ಸಂಸ್ಕೃತಿಯ ಬಹುಪಾಲು ಹಬ್ಬಗಳು ಸಂಕೇತಿಸುವುದು ಕಾಲವನ್ನು ಗೆಲ್ಲುವ ಬಗೆಯನ್ನೇ. ಅದರಲ್ಲೂ ಯುಗಾದಿಹಬ್ಬವಂತೂ ಈ ಸಂಕೇತವನ್ನು ಘಂಟಾಘೋಷವಾಗಿ ಸಾರುತ್ತಿದೆ.

ಕಾಲ ಪ್ರತಿ ಕ್ಷಣವೂ ಈ ಜಗತ್ತನ್ನು ತಿನ್ನುತ್ತಲೇ ಇರುತ್ತದೆಯಂತೆ. ಜಗತ್ತನ್ನು ತಿನ್ನುವುದು ಎಂದರೆ ಅದನ್ನು ಇಲ್ಲವಾಗಿಸುವುದು ಎಂದರ್ಥ ತಾನೆ? ಕಾಲ ಹೀಗೆ ಜಗತ್ತನ್ನು ತಿನ್ನುವುದಾದರೂ ಏಕೆ? ಜಗತ್ತನ್ನು ಸೃಷ್ಟಿಸುವುದಕ್ಕಾಗಿಯೇ! ನಮಗೆ ಕೆಲಸ ಮಾಡಲು ಶಕ್ತಿ ಬೇಕು; ಶಕ್ತಿಗಾಗಿ ಅನ್ನ ಬೇಕಷ್ಟೆ. ಹೀಗೆಯೇ ಕಾಲದ ಕೆಲಸವೇ ಜಗತ್ತು. ಅದಕ್ಕೂ ಜಗತ್ತನ್ನು ಸೃಷ್ಟಿಸಲು ಶಕ್ತಿ ಬೇಕು, ಅನ್ನ ಬೇಕು. ಎಂದರೆ ಕಾಲದ ಕಾರ್ಯವೂ ಕಾರಣವೂ ಎರಡೂ ಕೂಡ ಜಗತ್ತೇ; ಕಾಲದ 'ಇನ್ ಪುಟ್' ಮತ್ತು 'ಔಟ್ ಪುಟ್' – ಎರಡೂ ಜಗತ್ತೇ. ಈ ಜಗತ್ತಿನಲ್ಲಿ ನಾವೂ ಇದ್ದೇವೆ – ನಾವು, ನೀವು ಕೂಡ ಜಗತ್ತೇ ಅಲ್ಲವೇ? ನಮಗೂ ಹುಟ್ಟಿದೆ, ಸಾವಿದೆ, ಮತ್ತೆ ಹುಟ್ಟಿದೆ – ಹೀಗೆ ಇದು ಚಕ್ರವಾಗಿ ಮುಂದುವರೆಯುತ್ತಲೇ ಇರುತ್ತದೆ. ಸಾವಿಗೆ ತುತ್ತಾದವರನ್ನು 'ಕಾಲವಾದರು' ಎಂದು ಹೇಳುವುದರ ಸ್ವಾರಸ್ಯವನ್ನು ಇಲ್ಲಿ ಮೆಲುಕು ಹಾಕಬಹುದು. ಸಾವಿನ ಒಡೆಯನಾದ ಯಮನಿಗಿರುವ ಹಲವು ಹೆಸರುಗಳಲ್ಲಿ 'ಕಾಲ' ಎನ್ನುವುದು ಕೂಡ ಒಂದು. 'ತೊಟ್ಟಿಲುಗಳೆಷ್ಟು ಮಸಣಗಳಷ್ಟು ಧರೆಯೊಳಗೆ ತೊಟ್ಟಿಲಿಗೆ ಹಬ್ಬ ಮಸಣವು ತೇಗುತಿರಲು' ಎನ್ನುವ ಕಗ್ಗದ ಮಾತು ಕಾಲದ ವೈಭವವನ್ನು ಸೊಗಸಾಗಿ ಧ್ವನಿಸುತ್ತಿದೆ.

ಕಾಲದ ಸೃಷ್ಟಿಕ್ರಿಯೆಯೂ ಸಂಹಾರಕ್ರಿಯೆಯೂ ಏಕಕಾಲದಲ್ಲಿ ನಡೆಯುತ್ತಿರುತ್ತದೆ. ಆದರೆ ಅದನ್ನು ನಮ್ಮ ಕಣ್ಣುಗಳು ಸುಲಭವಾಗಿ ಕಾಣಲಾರವು; ಬುದ್ಧಿಯು ಸುಲಭವಾಗಿ ಗ್ರಹಿಸುವುದಿಲ್ಲ. ಒಂದು ವೇಳೆ ನಮ್ಮ ಭಾವ–ಬುದ್ಧಿಗಳು ಈ ಸೃಷ್ಟಿ–ಸಂಹಾರಕ್ರಿಯೆಯ ಏಕಾವತಾರವನ್ನು